ದಿನಾಂಕಃ 11-02-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.

<u>ಪಾಟೀ ಸವಾಲು ಃ **3** ನೇ ಪ್ರತಿವಾದಿ ಪರ ಶ್ರೀ ಯು ಬಿ ಆರ್ ವಕೀಲರಿಂದ</u>

ಈ ದಾವೆಯನ್ನು ನಾನು ಮತ್ತು ವಿಶಾಲಾಕ್ಷಿ ಹೂಡಿರುತ್ತೇವೆ. ಈ ದಾವೆಯನ್ನು ಪಾರ್ವತಮ್ಮ, ಸರೋಜಮ್ಮ, ಮಾರೇಶ, ಹೇಮರೆಡ್ಡಿ ಮತ್ತು ಪಾಪಮ್ಮ ರವರ ವಿರುದ್ದ ಹೂಡಿರುತ್ತೇವೆ. ಈ ದಾವೆಯನ್ನು ನನ್ನ ತಂದೆ ಆಸ್ತಿಯಲ್ಲಿ ವಿಭಾಗ ಕೋರಿ ಹೂಡಿರುತ್ತೇವೆ. ನನ್ನ ತಂದೆಯ ಹೆಸರು ವೆಂಕೋಬಣ್ಣ.

ದಾವಾ 3 ನೇ ಆಸ್ತಿ ಸರ್ವೇ ನಂ. 111/*/1 ಕ್ಷೇತ್ರ 3 ಎಕರೆ 14 ಗುಂಟೆ ಈ ಪ್ರಸ್ತುತ ಎಸ್ ಎ ಈರಪ್ಪ ತಂದೆ ಹೊಸಗೇರಪ್ಪ ಈತನ ಹೆಸರಲ್ಲಿ ಇರುತ್ತದೆ. ಸದರಿ ಎಸ್ ಎ ಈರಪ್ಪ ತಂದೆ ಹೊಸಗೇರಪ್ಪ ನನ್ನ ತಂದೆ ಅಲ್ಲ ಎಂದರೆ ಸರಿ. ಸದರಿ ಆಸ್ತಿಯ ಪಹಣಿ ಪತ್ರಿಕೆಯ ಮಾಲೀಕತ್ವದ ಕಲಂ ನಲ್ಲಿ ಎಸ್ ಎ ಈರಪ್ಪರವರ ಹೆಸರು ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಅದೇರೀತಿ ಸದರಿ ಆಸ್ತಿಯ ಚಾಲ್ತಿ ಪಹಣಿ ಪತ್ರಿಕೆಯಲ್ಲಿ ಎಸ್ ಎ ಈರಪ್ಪನ ಹೆಸರೇ ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಅದೇರೀತಿ ಕಬ್ಜೆ ಕಾಲಂನಲ್ಲಿಯೂ ಸಹ ಎಸ್ ಎ ಈತಪ್ಪನ ಹೆಸರು ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು ಮೋಸ ಮಾಡಿ ಮಾಡಿಸಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಆಸ್ತಿಯನ್ನು ಎಸ್ ಎ ಈರಪ್ಪ ಈತನು ಪಾರ್ವತಮ್ಮ ಗಂಡ ವೆಂಕೋಬರವರಿಂದ ಖರೀದಿ ಮಾಡಿರುತ್ತಾರೆ ಎಂದರೆ, ಸಾಕ್ಷಿಯು ಮೋಸ ಮಾಡಿ ಮಾಡಿಸಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಆಸ್ತಿಯನ್ನು ಎಸ್ ಎ ಈರಪ್ಪ ಖರೀದಿ ಮಾಡಿ 2003-04 ನೇ ಸಾಲಿನಲ್ಲಿ ನಿಪಿ-9 ರಂತೆ ಎಮ್ ಆರ್ 21 ರಂತೆ ದಿಃ 30-01-2004 ರಂದು ಮ್ಯೂಟೇಶನ್ ಮಾಡಿಸಿಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಖರೀದಿ ಮಾಡಿದಾಗಿನಿಂದಲೂ ಸದರಿ ಆಸ್ತಿಯು ಎಸ್ ಎ ಈರಪ್ಪನ ಮಾಲೀಕತ್ವ ಮತ್ತು ಸ್ವಾಧೀನದಲ್ಲಿ ಇರುತ್ತದೆ ಎಂದರೆ, ಸಾಕ್ಷಿಯು ನಮ್ಮ ಕಬ್ಜೆಯಲ್ಲಿ ಇರುತ್ತದೆ ಎಂದು ನುಡಿಯುತ್ತಾರೆ.

ಪಾರ್ವತಮ್ಮ ಗಂಡ ವೆಂಕೋಬಣ್ಣ ನನಗೆ ತಾಯಿಯಾಗಬೇಕು. ಸರ್ವೇ ನಂ. 111/*/1 ಕ್ಷೇತ್ರ 3 ಎಕರೆ 14 ಗುಂಟೆ ಆಸ್ತಿಗೂ ಮತ್ತು ನಮಗೂ ಯಾವುದೇ ರೀತಿ ಸಂಬಂಧ ಮತ್ತು ಮಾಲೀಕತ್ವ ಇರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಎಸ್ ಎ ಈರಪ್ಪ ಈತನಿಗೆ ಯಾರು ವಾರಸುದಾರರು ಇಲ್ಲದೇ ಇರುವ ಕಾರಣ ಸದರಿ ಆಸ್ತಿಯನ್ನು ಕಬಳಿಸಬೇಕು ಎಂಬ ಉದ್ದೇಶದಿಂದ ಸುಳ್ಳು ದಾವೆ ಹೂಡಿರುತ್ತೇನೆ ಎಂದರೆ ಸರಿಯಲ್ಲ.

ನನ್ನ ತಂದೆ ಮತ್ತು ತಾಯಿಗೆ ನಾವು ನಾಲ್ಕು ಜನ ಮಕ್ಕಳು ಇರುತ್ತೇವೆ ಎಂದರೆ ಸರಿ. ನನ್ನ ಗಂಡನ ಮನೆ ಹುಡಾ ಗ್ರಾಮದಲ್ಲಿ ಇರುತ್ತದೆ. ನನ್ನ ಗಂಡನ ಊರು ಹುಡಾ ಗ್ರಾಮ ಇರುತ್ತದೆ. ನನ್ನ ತಂದೆ ತೀರಿಕೊಂಡ ನಂತರ ನಮ್ಮ ಮನೆತನದ ಹಿರಿತನವನ್ನು ನನ್ನ ತಾಯಿಯಾದ 1 ನೇ ಪ್ರತಿವಾದಿ ಮಾಡುತ್ತಾ ಬಂದಿರುತ್ತಾರೆ ಎಂದರೆ ಸರಿಯಲ್ಲ. 3 ನೇ ಪ್ರತಿವಾದಿಯು ಯಾರ ಮಗ ಇರುತ್ತಾನೆ ಎಂದು ನನಗೆ ಗೊತ್ತಿಲ್ಲ. 3 ನೇ ಪ್ರತಿವಾದಿಯ ಊರು ಅಂಬಾಮಠ ಇರುತ್ತದೆ. 3 ನೇ ಪ್ರತಿವಾದಿಯು ಈರಪ್ಪನಿಗೆ ಸೇರಿದ ಶಾಲೆಯನ್ನು ನೋಡಿಕೊಂಡು ಹೋಗುತ್ತಿದ್ದಾನೆ. 3 ನೇ

ಪ್ರತಿವಾದಿಯು ಸರ್ವೇ ನಂ. 111/*/1 ನೇದ್ದರಲ್ಲಿ ಯಾವಾಗ ಬಂದಿದ್ದ ಎನ್ನುವ ವಕೀಲರ ಪ್ರಶ್ನೆಗೆ ಸಾಕ್ಷಿಯು ನೀವು ಹೇಳುತ್ತಿರುವುದು ಎಲ್ಲವೂ ಸುಳ್ಳು ಎಂದು ಉತ್ತರಿಸಿರುತ್ತಾರೆ. ದಾವಾ ಆಸ್ತಿ ಸಂಖ್ಯೆ-3 ಕ್ಕೂ ಮತ್ತು ನಮಗೂ ಯಾವುದೇ ರೀತಿ ಹಕ್ಕು, ಅಧಿಕಾರ ಮತ್ತು ಮಾಲೀಕತ್ವ ಇರುವುದಿಲ್ಲ ಎಂದರೆ ಸರಿಯಲ್ಲ. 3 ನೇ ಪ್ರತಿವಾದಿಯನ್ನು ಅನಾವಶ್ಯಕವಾಗಿ ಈ ದಾವೆಯಲ್ಲಿ ಸೇರಿಸಿರುತ್ತೀರಿ ಎಂಬ ವಕೀಲರ ಪ್ರಶ್ನೆಗೆ ಸಾಕ್ಷಿಯು ನೋಡಿಕೊಳ್ಳುವ ಜವಾಬ್ದಾರಿ ಅವರದ್ದೇ ಇರುವುದರಿಂದ ಅವರನ್ನು ಸೇರಿಸಿರುತ್ತೇವೆ ಎಂದು ನುಡಿಯುತ್ತಾರೆ.

3 ನೇ ಪ್ರತಿವಾದಿ ಶಾಲೆ ನಡೆಸಿಕೊಂಡು ಹೋಗುತ್ತಿದ್ದಾನೆ. ದಾವೆ ಹೂಡುವ ಪೂರ್ವದಲ್ಲಿ 3 ನೇ ಪ್ರತಿವಾದಿಯ ಬಗ್ಗೆ ಮತ್ತು ಆತನ ಕೆಲಸದ ಬಗ್ಗೆ ಹೇಳಿ ಹಾಕಿರುತ್ತೀರಿ ಎಂಬ ವಕೀಲರ ಪ್ರಶ್ನೆಗೆ ಸಾಕ್ಷಿಯು ನೀವು ಹೇಳುತ್ತಿರುವುದು ಎಲ್ಲ ಸುಳ್ಳು ಎಂದು ಉತ್ತರಿಸಿರುತ್ತಾರೆ.

<u>ಪಾಟೀ ಸವಾಲು ಃ **1** ಮತ್ತು **2** ನೇ ಪ್ರತಿವಾದಿ ಪರ ವಕೀಲರಿಂದ</u>

1 ಮತ್ತು 2 ನೇ ಪ್ರತಿವಾದಿಯರು ಮತ್ತು ಅವರ ಪರ ವಕೀಲರು ಗೈರು ಹಾಜರಿರುವ ಕಾರಣ ಮತ್ತು ಸದರಿರವರು ಯಾವುದೇ ಪ್ರತಿವಾದ ಪತ್ರ ಸಲ್ಲಿಸದೇ ಇರುವ ಕಾರಣ ಪಾಟೀ ಸವಲೂ ಇಲ್ಲ ಎಂದು ತೆಗೆದುಕೊಳ್ಳಲಾಯಿತು.

<u>ಪಾಟೀ ಸವಾಲು ಃ **5** ನೇ ಪ್ರತಿವಾದಿ ಪರ ವಕೀಲರಿಂದ</u>

5 ನೇ ಪ್ರತಿವಾದಿ ಪರ ವಕೀಲರು ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರಿದ್ದು ನೀಡಲಾಯಿತು.

ಮರು ವಿಚಾರಣೆ ಇಲ್ಲ.

(ನನ್ನ ಉಕ್ತದ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿರುತ್ತಾರೆ)

ಓ ಹೇ ಕೇ ಸರಿ ಇದೆ.

ಅಪರ ಜೆ.ಎಮ್.ಎಫ್.ಸಿ., ಸಿಂಧನೂರು.